# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1983 |
| ಸದಸ್ಯರ ಹೆಸರು | : | ಶ್ರೀ ಕೆ.ಹರೀಶ್ ಕುಮಾರ್ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 16.03.2022 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಸಂಘದ 33 ಸೆಂಟ್ಸ್ ಸ್ಥಳ ಮಂಗಳೂರು ಅತ್ತಾವರ ಗ್ರಾಮದ ಸರ್ವೆ ನಂ.278/2ಬಿ ಯಲ್ಲಿದ್ದು, 1938 ರಿಂದ B.P.Mis 1216 ದಿನಾಂಕ 28/04/1938 ರಂತೆ ಲೈಸೆನ್ಸ್ ಪಾವತಿಸಿ ಸ್ಥಳವನ್ನು ಸಂಘದ ಸ್ವಾಧೀನದಲ್ಲಿ ಇರಿಸಿಕೊಂಡ ಬಗ್ಗೆ, ಹಾಗೂ ವಿಭಾಗೀಯ ಆಯುಕ್ತರು ಮೈಸೂರು ಇವರ ಪತ್ರ A6PR24/56-57 ದಿನಾಂಕ 17/12/1956 ರಂತೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಹೆಸರಿಗೆ ಮಂಜೂರಾಗಿರುವ ಬಗ್ಗೆ, ಮೈಸೂರು ಸರ್ಕಾರದ ಆದೇಶ ಸಂಖ್ಯೆ: RD40LGU57 ದಿನಾಂಕ 09/09/1957 ರಲ್ಲಿ ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಸಂಘಕ್ಕೆ ಮಂಗಳೂರು ತಾಲ್ಲೂಕು ಅತ್ತಾವರ ಗ್ರಾಮದ ಸ.ನಂ. 278/2ಬಿ ರಲ್ಲಿ 0.33 ಎಕರೆ ಜಮೀನು ಮೈಸೂರು ವಿಭಾಗೀಯ ಆಯುಕ್ತರು ಇವರ ಆದೇಶದಂತೆ ಮಂಜೂರಾಗಿರುವ ಬಗ್ಗೆ, ಯಾವುದೇ ದಾಖಲೆಗಳು ಇರುವುದಿಲ್ಲ. |
| ಆ) | ಸದರಿ ಆದೇಶವು ಕಂದಾಯ ಇಲಾಖೆಯಲ್ಲಿ ಇದ್ದರೂ ಸಹಾಯಕ ಆಯುಕ್ತರು ಹಾಗೂ ಉಪ ವಿಭಾಗ ದಂಡಾಧಿಕಾರಿ ಮಂಗಳೂರು ಇವರು LND/PDR/117/2018-19 ದಿನಾಂಕ 30/11/2021 ರಲ್ಲಿ ಮಂಜೂರಾತಿ ಆದೇಶವನ್ನು ರದ್ದುಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಯಾವುದೇ ಮಂಜೂರಾತಿ ಆದೇಶ ಇಲ್ಲದಿರುವುದರಿಂದ ಸಹಾಯಕ ಆಯುಕ್ತರು, ಹಾಗೂ ಉಪ ವಿಭಾಗ ದಂಡಾಧಿಕಾರಿ, ಮಂಗಳೂರು ಇವರು ನಡವಳಿ ಸಂಖ್ಯೆ: ಎಲ್‌ಎನ್ ಡಿ.ಪಿಡಿಆರ್.117/2018-19 ದಿನಾಂಕ 30.11.2021 ರಂತೆ ಪಹಣಿಯ ಕಾಲಂ 9 ರಲ್ಲಿ 'ಸರ್ಕಾರ' ಎಂದು ದಾಖಲಿಸಲಾಗಿದೆ. |
| ಇ) | ಬಂದಿದ್ದಲ್ಲಿ, ಪುನರ್ ಪರಿಶೀಲಿಸಿ ಮಂಜೂರಾತಿಗೆ ಸರ್ಕಾರವು ಕ್ರಮಕೈಗೊಳ್ಳುವುದೇ? | ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ. |

**(ಕಡತ ಸಂಖ್ಯೆ:ಕಂಇ 38 ಎಲ್‌ಜಿಎ 2022)**

**(ಆರ್.ಅಶೋಕ)**
ಕಂದಾಯ ಸಚಿವರು.